

# ಆಸೆ ಆಮಿಷಗಳೇ ವಂಚನೆಗೆ ಮೂಲ

**ಸೈಬರ್ ಅಪರಾಧಗಳ ಸ್ವರೂಪ ಹಾಗೂ ಅವುಗಳನ್ನು ತಡೆಗಟ್ಟುವ ಮಾಹಿತಿಯನ್ನು ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ಪರುಶುರಾಮ್ 'ಸುಧಾ' ಜೊತೆ ಹಂಚಿಕೊಂಡಿದ್ದಾರೆ.**

- ಸೈಬರ್ ಅಪರಾಧಗಳ ಸ್ವರೂಪ ಹೇಗಿದೆ ಮತ್ತು ನಿತ್ಯ ಎಷ್ಟು ಪ್ರಕರಣಗಳು ದಾಖಲಾಗುತ್ತಿವೆ?

ಇತ್ತೀಚಿನ ದಿನಗಳಲ್ಲಿ ಸೈಬರ್ ಅಪರಾಧಗಳು ವಿಭಿನ್ನವಾದ ಸ್ವರೂಪವನ್ನು ಪಡೆದುಕೊಂಡಿದೆ. ಎಟಿಎಂ ವಿವರ ಹಾಗೂ ಒಟಿಪಿ ಪಡೆದು ಬ್ಯಾಂಕ್ ಖಾತೆಯಿಂದ ಹಣ ಲಪಟಾಯಿಸುವುದು, ಕಡಿಮೆ ಹಣಕ್ಕೆ ವಾಹನ ಮಾರಾಟ ಮಾಡುವುದು, ಲಾಟರಿ–ಬಹುಮಾನ ಬಂದಿರುವುದಾಗಿ ನಂಬಿಸುವುದು, ಜಮೀನು–ಸೈಟ್‌ನಲ್ಲಿ ಮೊಬೈಲ್ ಟವರ್ ಅಳವಡಿಸುವ ಭರವಸೆ, ಎಂಪ್ಲಾಯ್‌ಮೆಂಟ್ ವೆಬ್‌ಸೈಟ್ ಮೂಲಕ ಮಾಹಿತಿ ಪಡೆದು ಕೆಲಸಕೊಡಿಸುವುದಾಗಿ ಹಣಪಡೆಯುವುದು, ಲೋನ್ ಕೊಡುತ್ತೇವೆಂದು ಹೇಳಿ ಹಣ ಪಡೆಯುವುದು ಇತ್ಯಾದಿ. ಪ್ರತಿನಿತ್ಯ ಸೈಬರ್ ಪೊಲೀಸ್ ಠಾಣೆಯಲ್ಲಿ ಕನಿಷ್ಠ 2 ಅಪರಾಧಗಳು ವರದಿಯಾಗುತ್ತಿವೆ.

- ಸೈಬರ್ ಅಪರಾಧಗಳು ಹೆಚ್ಚಲು ಪ್ರಮುಖ ಕಾರಣ?

ಇತ್ತೀಚಿನ ದಿನಗಳಲ್ಲಿ ಸಾಮಾನ್ಯ ಜನರೂ ಸಾಮಾಜಿಕ ಜಾಲತಾಣಗಳನ್ನು ಹೆಚ್ಚಾಗಿ ಬಳಸುತ್ತಿದ್ದು, ಇವುಗಳಿಂದ ಎದುರಾಗುವ ತೊಂದರೆಗಳ ಬಗ್ಗೆ ಅರಿವು ಇಲ್ಲದಿರುವುದು. ಹಾಗೂ ಆಸೆಆಮಿಷಗಳಿಗೆ ಒಳಗಾಗುವುದೇ

ಜಾಲತಾಣಗಳಲ್ಲಿ ತಮ್ಮ ವೈಯಕ್ತಿಕ ವಿವರಗಳನ್ನು ಅಪ್‌ಲೋಡ್ ಮಾಡುತ್ತಿದ್ದಾರೆ. ಈ ಮಾಹಿತಿ ಪಡೆದು ಯುವಕರನ್ನು ಸಂಪರ್ಕಿಸುವ ವಂಚಕರು, ಉದ್ಯೋಗದ ಆಮಿಷವೊಡ್ಡಿ ಶುಲ್ಕದ ಹೆಸರಿನಲ್ಲಿ ಲಕ್ಷಾಂತರ ರೂಪಾಯಿ ಪಡೆದು ವಂಚಿಸುತ್ತಿದ್ದಾರೆ.

- ಕಾಲ್ ಗರ್ಲ್ ಹಾಗೂ ಬಾಯ್ ಡೇಟಿಂಗ್: 'ವಿಚ್ಛೇದಿತ ಶ್ರೀಮಂತ ಮಹಿಳೆಗೆ ಹುಡುಗರು ಬೇಕಾಗಿದ್ದಾರೆ', 'ಸುಂದರ ಹುಡುಗಿಯರು ದೊರೆಯುತ್ತಾರೆ' – ಈ ಬಗೆಯ ಜಾಹೀರಾತುಗಳು ಅಂತರ್ಜಾಲದಲ್ಲಿ ಎದುರಾಗುತ್ತಲೇ ಇರುತ್ತವೆ. ಚಪಲಚಿತ್ತರು ಇವುಗಳಿಗೆ ಮರುಳಾಗಿ ಪ್ರತಿಕ್ರಿಯಿಸಿದರೆ, ಆ ಕಡೆ ಗಾಳ ಸಿದ್ಧವಾಗಿರುತ್ತದೆ. ಮಧ್ಯವರ್ತಿ ಶುಲ್ಕದ ಹೆಸರಿನಲ್ಲಿ ಹಣ ಪೀಕಿ ಕಣ್ಮರೆಯಾಗುತ್ತಾರೆ.
- ಎಟಿಎಂ ಕಳ್ಳರು: ಎಟಿಎಂ ಯಂತ್ರಗಳಲ್ಲಿ 'ಸ್ಕಿಮ್ಮರ್' ಎಂಬ ಸಾಧನ ಅಳವಡಿಸಿ, ಚಿಕ್ಕದಾದ ಕ್ಯಾಮೆರಾ ಹೊಂದಿಸಿ ಎಟಿಎಂ ಕಾರ್ಡ್ ಸಂಖ್ಯೆ ಹಾಗೂ ಪಿನ್ ಸಂಖ್ಯೆ ಕದ್ದು ಹಣ ದೋಚುವವರೂ ಇದ್ದಾರೆ.

## ಬೆದರಿಕೆ ಒಡ್ಡುವ ಸೈಬರ್ ಅಪರಾಧ

ಸಾಮಾಜಿಕ ಜಾಲತಾಣಗಳಲ್ಲಿ ಬೆದರಿಕೆ ಒಡ್ಡುವಂತಹ ಕೃತ್ಯಗಳು ಈಗ ಸಹಜ ಎನ್ನುವಂತಾಗಿದೆ. ಬಹುತೇಕ ಸಂದರ್ಭದಲ್ಲಿ ರಾಜಕೀಯ ಮತ್ತು ಸೈದ್ಧಾಂತಿಕ ಭಿನ್ನಾಭಿಪ್ರಾಯದ ಕಾರಣ ಬೆದರಿಕೆ ಒಡ್ಡಲಾಗಿರುತ್ತದೆ. ಹಲ್ಲೆ ನಡೆಸುವ, ಹತ್ಯೆ ಮಾಡುವ ಮತ್ತು ಅತ್ಯಾಚಾರ ಎಸಗುವ ಬೆದರಿಕೆಗಳೂ ವರದಿಯಾಗಿವೆ. ಇವೆಲ್ಲವೂ ಗಂಭೀರ ಅಪರಾಧ ಕೃತ್ಯಗಳಾಗಿದ್ದು, ಶಿಕ್ಷಾರ್ಹವಾಗಿವೆ. ಆದರೆ, ಇಂತಹ ಕೃತ್ಯಗಳಲ್ಲೂ

